ಕುಮಾರ ಚಲವಾದಿ, ಹೊಳೆನರಸಿಪುರ
*ಮನುಷ್ಯ ಶ್ರೀಮಂತನಾದಷ್ಟೂ ಹಣದ ಆಸೆ ಹೆಚ್ಚಾಗಲು ಕಾರಣವೇನು?*




ಪರ್ವತ ನಿಯಮ; ಮೇಲೇರಿದಷ್ಟೂ ಆಕ್ಸಿಜನ್ ಬಯಕೆ ಹೆಚ್ಚುಹೆಚ್ಚಾಗುತ್ತದೆ!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಪರಮಾತ್ಮನು ಕೊರಳಿನಲ್ಲಿ ಹಾವುಗಳನ್ನು ಹಾಕಿಕೊಂಡಿರುವುದೇಕೆ?*
ಯಾವ ಚೈನ್ ಸ್ನ್ಯಾಚರೂ ಸ್ನ್ಯಾಚ್ ಮಾಡುವ ಭಯವಿರುವುದಿಲ್ಲವೆಂದು.

ಎನ್. ಗೋಪಾಲರಾವ್, ಬೆಂಗಳೂರು
*ಶಬರಿಯ ಎಂಜಲು ಹಣ್ಣುಗಳನ್ನು ಸೇವಿಸಿದ ರಾಮನಿಗೆ ಅಗಸನ ಕುಚೋದ್ಯದ ಮಾತುಗಳನ್ನು ಅರಗಿಸಿಕೊಳ್ಳಲಾಗಲಿಲ್ಲವೇಕೆ?*
ಸಹಜವೇ. ಲಾಲಾರಸಕ್ಕೆ ಇರುವ ಅರಗಿಸುವ ಶಕ್ತಿ ಲಾವಾರಸಕ್ಕೆ ಇಲ್ಲ.

ಜಯದೇವ ಹಲಕಿ, ಗೋಕಾಕ
*ನಿಮಗೆ ಗಾಡ್ ಫಾದರ್ ಯಾರು?*
ಛೆ! ಪ್ರಶ್ನೆಗೆ ಉತ್ತರಿಸಲು ಅದೆಲ್ಲ ಬೇಕಾಗಿಲ್ಲ. ಪ್ರಶಸ್ತಿಗೆ ಮಾತ್ರ.

ಎಂ.ಎನ್. ಸೋಮಶೇಖರ್, ಮೈಸೂರು
*ಬಂಡೆಗಳು ನಿಮ್ಮನ್ನು ಮಾತನಾಡಿಸಿದರೆ ನೀವು ಹೇಗೆ ಉತ್ತರಿಸುತ್ತೀರಿ?*




ಬಂಡೇ ಮಾತರಂ, ಸುದೃಢಾಂ, ಸುಬಲಾಂ...

ಸಂತೇಬೆನ್ನೂರು ಫೈಜ್ನಟ್ರಾಜ್, ದಾವಣಗೆರೆ
*ಮಾನವನ ಜೀವನದ ಕೊನೆಯ ಸಾಧನೆ ಏನಾಗಿರಬೇಕು ಸಾರ್?*
ನಾಲ್ಕು ಜನಕ್ಕೆ ಭಾರವಾಗದಂತೆ ಬದುಕು ರೂಪಿಸಿಕೊಂಡಿರಬೇಕು.

ಎಂ.ಬಿ. ಹರೀಶ್, ಮಂಡ್ಯ
*ಬಹುತೇಕ ರಾಜಕಾರಣಿಗಳು ಕಾನೂನು ಪದವೀಧರರಾಗಿರುತ್ತಾರಲ್ಲಾ...?*
ಯಾವುದನ್ನು ಧ್ವಂಸ ಮಾಡಬೇಕೋ ಅದರ ಬಗ್ಗೆ ಮಾಹಿತಿ ಹೊಂದುವುದು ಕ್ರಿಮಿನಲ್‌ಗಳ ಲಕ್ಷಣ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಬೇರೊಬ್ಬರ ಹಿತಕ್ಕಾಗಿ ಬದುಕುವುದಕ್ಕೂ, ಸ್ವಾರ್ಥಕ್ಕಾಗಿ ಬದುಕುವುದಕ್ಕೂ ವ್ಯತ್ಯಾಸ?*
ಒಂದು ತರಕಾರಿಯ ಬದುಕು, ಇನ್ನೊಂದು ತಕರಾರಿಯ ಬದುಕು.

ದೇವೇಂದ್ರ. ಕಡೂರು
*ಹೆಣ್ಣುಮಕ್ಕಳು ತಲೆ ಬಗ್ಗಿಸಿ ನಡೆಯೋದೇ ಬಿಟ್ಟುಬಿಟ್ರಲ್ಲಾ...?*
ಸುಳ್ಳು. ಹೆಣ್ಣು ಇಂದು ಇನ್ನೂ ಹೆಚ್ಚು ತಲೆ ಬಗ್ಗಿಸಿ ನಡೆಯುತ್ತಾಳೆ. ಮೊಬೈಲಲ್ಲಿ ಮೆಸೇಜ್, ವಾಟ್ಸಪ್, ವಿಡಿಯೋ ನೋಡಬೇಕಲ್ಲ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಕಳಂಕರಹಿತ ರಾಜಕಾರಣಿಗಳು ದೊರಕಿದಂದು ಇದು ರಾಮರಾಜ್ಯವಾಗುತ್ತದಂತೆ. ನಿಜವೇ ಹೇರಾಂ?*
ಕಳಂಕರಹಿತ ರಾಜಕಾರಣಿಯೇ? ಹುಚ್ಚಪ್ಪ! ಸೀಡ್‌ಲೆಸ್ ಕಡಲೆಕಾಯಿ ಎಂದಂತಾಯಿತು.

ಪ್ರದೀಪ್ ಎನ್, ಚೆಲುವರಸನಕೊಪ್ಪಲು
*ದಂ-ಪತಿಗಳು ಪರಸ್ಪರ ಪರಿಚಯಿಸುವಾಗ ಗಂಡ-ಹೆಂಡತಿ ಎಂಬ ಪದಗಳನ್ನು ಬಳಸಿ ಪರಿಚಯಿಸುವುದಿಲ್ಲವೇಕೆ?*
ಸರಿಯೇ; ಎಲ್ಲಕ್ಕೂ **why & if** ಅನ್ನುವವಳು ವೈಫ್; ಹಸುವಂತಾಗಿ ಬೆಂಡ್ ಆಗಿರುವವನು **husband.**

ಬಿ.ಎ. ಅಜರುದ್ದೀನ್, ಬಾಚಹಳ್ಳಿ
*ದೇವರು, ಧರ್ಮದ ಹೆಸರಿನಲ್ಲಿ ಮುಗ್ಧರನ್ನು ಕೊಲ್ಲುವ ಮತಾಂಧರನ್ನು ದೇವರೇಕೆ ದಂಡಿಸುವುದಿಲ್ಲ?*
ದುಷ್ಟ-ಶಿಷ್ಟ ಎರಡು ಕ್ರಿಕೆಟ್ ಟೀಂಗಳು. ದೇವ ಅಂಪೈರ್. ಅಂಪೈರ್‌ಗೆ ಔಟ್ ಅನ್ನಬಹುದಷ್ಟೆ, ಔಟ್ ಮಾಡುವಂತಿಲ್ಲ.

ಆರ್.ಸಿ. ಪರಶುರಾಮ್, ಶಿಕಾರಿಪುರ
*ಎಲ್ಲಾ ದೇಶಗಳಿಗೂ ಒಂದೊಂದೇ ಹೆಸರಿರುವಾಗ ಭಾರತಕ್ಕೆ ಮಾತ್ರ ಇಂಡಿಯಾ ಎನ್ನುವ ಮತ್ತೊಂದು ಹೆಸರೇಕೆ?*
**Dia ಎಂದರೆ ವ್ಯಾಸ; (ಮಹಾ)ಭಾರತ ಉದಯವಾದದ್ದು ವ್ಯಾಸನಲ್ಲಿ - ಎಂದರೆ In dia; ದೇರ್‌ಫೋರ್ ಭಾರತ = India!**

## ಬಹುಮಾನಿತ ಪ್ರಶ್ನೆ

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
*ಬೆಟ್ಟವನ್ನೇ ಹೊತ್ತು ಹಾರಿದ ಹನುಮನಿಗೆ ಲಂಕೆಯಿಂದ ಸೀತೆಯನ್ನು ಹೊತ್ತು ತರಲು ಸಾಧ್ಯವಾಗಲಿಲ್ಲವೆ?*
ಊಹೂಂ. ಗೂಡ್ಸ್ ವೆಹಿಕಲ್‌ನಲ್ಲಿ ಪ್ಯಾಸೆಂಜರ್‌ಗಳು ಬರುವಂತಿಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಮನುಷ್ಯನಿಗೆ ತಾಳ್ಮೆಯೇ ಇಲ್ಲದಿದ್ದರೆ ಏನಾಗುತ್ತದೆ?*
ಆಗಾಗ್ಗೆ ಕೆನ್ನೆ ಊದುತ್ತದೆ.

ರವಿ ಎಂ. ಪೈ, ಕಾಸರಕೋಡ
*ನಿನ್ನೆಗೂ, ನಾಳೆಗೂ ಏನು ವ್ಯತ್ಯಾಸ?*
ನಿನ್ನೆ ಬೇಳೆ, ಬೆಲ್ಲ; ಇಂದು ಹೂರಣ; ನಾಳೆ ಒಬ್ಬಟ್ಟು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ತಾಯಿಗೂ, ದೇವರಿಗೂ ಏನು ವ್ಯತ್ಯಾಸ?*
ತಾಯಿಯನ್ನು ಬೈದರೆ ಏನೇನೂ ಸಿಗುವುದಿಲ್ಲ. ದೇವರನ್ನು ಬೈದರೆ ಬುದ್ಧಿಜೀವಿಯ ಪಟ್ಟ, ಸವಲತ್ತು, ಝೆಡ್ ಸೆಕ್ಯುರಿಟಿ.

ಎಂ.ಎನ್. ಸೋಮಶೇಖರ್, ಮೈಸೂರು
*ದ್ರಾಕ್ಷಿಗೂ, ರುದ್ರಾಕ್ಷಿಗೂ ಏನು ವ್ಯತ್ಯಾಸ?*



ವೈನವಾಗಿದ್ರೆ ದ್ರಾಕ್ಷಿ, ವೈರಾಗ್ಯ ಇದ್ರೆ ರುದ್ರಾಕ್ಷಿ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಗಂಗೆಯನ್ನು ಧರೆಗಿಳಿಸಿದ ಭಗೀರಥನ ಪ್ರಯತ್ನಕ್ಕೆ ಏನೆಂದು ಹೇಳಬೇಕು ಶಿವಾ?*
ಇಳಿಸೋದು ಇಳಿಸಿದೆ. ಫಿಲ್ಟರ್ ಮೂಲಕ ಇಳಿಸಿದ್ದಿದ್ದರೆ ಕ್ಲೀನ್ ಮಾಡೋದು ತಪ್ಪಿತ್ತಲ್ಲಪ್ಪ.

ವಿ. ಹಮೀದ್, ವಿಟ್ಲ
*ಪ್ರೇಯಸಿ ಪ್ರತಿದಿನ ಕಿಸ್ ಕೇಳಲು ಕಾರಣವೇನು?*
ಎಚ್ಚರ! ಅದು ನೀವು ಧೂಮಪಾನ, ಮದ್ಯಪಾನ ಮಾಡಿದ್ದೀರೋ, ಇಲ್ಲವೋ ಎಂದು ಪರೀಕ್ಷಿಸುವ ವಿಧಾನ.

■ ರಾಮ್